ಪಿ.ಡಬ್ಲ್ಯು–01– ಜಯಶಂಕರ್ ಆರ್.

**ಸಾಕ್ಷಿಯನ್ನು ದಿನಾಂಕಃ 28.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ. ಕೆ.ಎಂ. ವಕೀಲರಿಂದಃ**

ನಾನು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಯ ಭಾಗಾಂಶ ಕೋರಿ ಹೂಡಿರುತ್ತೇನೆ. ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಅಲ್ಲಾ ಎಂದರೆ ಸರಿಯಲ್ಲ. ನಾನು, 2 ಮತ್ತು 3 ನೇ ಪ್ರತಿವಾದಿಗಳು 1 ಮತ್ತು 4 ನೇ ಪ್ರತಿವಾದಿಗಳ ಮಕ್ಕಳು ಎಂದರೆ ಸರಿ. ದಾವಾ ಆಸ್ತಿಯನ್ನು ದಿನಾಂಕಃ 22.02.1996 ರಂದು 1 ನೇ ಪ್ರತಿವಾದಿ ಕ್ರಯಕ್ಕೆ ಪಡೆದಿದ್ದು ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲರೂ ಒಟ್ಟಿಗೆ ಸಂಪಾದನೆ ಮಾಡಿ ಖರೀದಿಸಿದ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಮ್ಮ ತಂದೆಗೆ ಸೇರಿದ ಆಸ್ತಿಯಲ್ಲಿ ನಾವೆಲ್ಲರೂ ಭಾಗ ಮಾಡಿಕೊಂಡು ನಮ್ಮ ಭಾಗಕ್ಕೆ ಬಂದ ಆಸ್ತಿಯಲ್ಲಿ ಸ್ವಾಧೀನಾನುಭವವನ್ನು ಹೊಂದಿದ್ದು ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು ಅದರಲ್ಲಿ ನಮಗೆ ಯಾವುದೇ ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದು ಗೊತ್ತಿದ್ದರೂ ಸಹ ಅಕ್ರಮ ಲಾಭ ಗಳಿಸುವ ಸಲುವಾಗಿ ಹಾಗು 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ.

**3 ನೇ ಪ್ರತಿವಾದಿ ಹಾಗು ಅವರ ವಕೀಲರು ಗೈರು ಹಾಜರಿದ್ದು ಕಡತವನ್ನು ಪರಿಶೀಲಿಸಲಾಗಿ 3 ನೇ ಪ್ರತಿವಾದಿ ವಕೀಲರ ಮೂಲಕ ಹಾಜರಾಗಿದ್ದಾಗ್ಯೂ ಸಹ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದು ಕಂಡು ಬಂದಿದ್ದು ಆದ್ದರಿಂದ 3 ನೇ ಪ್ರತಿವಾದಿಯಿಂದ ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ಪರಿಗಣಿಸಲಾಯಿತು.**

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**